<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.103/2017</u>

ದಿಃ 07.07.2023
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-23 Pw-16

| | | |
|---|---|---|
| ಹೆಸರು | ಃ | ನಾಗೇಶ್ |
| ತಂದೆಯ ಹೆಸರು | ಃ | ಲಕ್ಕಣ್ಣ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಕಂಟ್ರ್ಯಾಕ್ಟರ್ |
| ವಾಸಸ್ಥಳ | ಃ | ಗೋವಿಂದರಾಜನಗರ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಈಗ ಸುಮಾರು 5-6 ವರ್ಷಗಳ ಹಿಂದೆ ನಾನು ದ್ವಿಚಕ್ರವಾಹನದ ಮೇಲೆ ಬರುತ್ತಿದ್ದಾಗ ದಾರಿಯಲ್ಲಿ ಪೊಲೀಸರು ಒಂದು ದಸ್ತಾವೇಜಿನ ಮೇಲೆ ನನ್ನ ಸಹಿಯನ್ನು ಪಡೆದಿರ

2. ಸದರಿ ದಸ್ತಾವೇಜನ್ನು ಈಗ ನೋಡಿ ಗುರುತಿಸುತ್ತಿದ್ದು ಅದನ್ನು ಈಗಾಗಲೇ ನಿಪಿ 17 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿಪಿ 17ಬಿ ಎಂದು ಗುರುತಿಸಲಾಯಿತು.

3. ನಿಪಿ 17ರಲ್ಲಿ ಏನು ಬರೆದಿದೆ ಎಂಬುವುದು ನನಗೆ ಮಾಹಿತಿ ಇರುವುದಿಲ್ಲ.

4. ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಟಿಟಿ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಮತ್ತು ಆ ಕುರಿತು ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

5. ಈಗ ನನಗೆ ಓದಿ ಹೇಳಿದ ನಿ.ಪಿ.17 ರಂತೆದಿಃ 03.11.2016 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 11.30 ರವೆರೆಗೆ ಚಾಸಾ 21 ಈತನು ಹಾಜರುಪಡಿಸಿದ್ದ ಟಿಟಿ ವಾಹನ ಸಂ. ಕೆಎ.02.ಎಸಿ.2121 ನ್ನು ಪೊಲೀಸರು ನನ್ನ ಸಮಕ್ಷಮದಲ್ಲಿ ಒಂದು ಅಮಾನತ್ತಿನ ಪಂಚನಾಮೆಯ ಅಡಿಯಲ್ಲಿ ಅಮಾನತ್ತುಪಡಿಸಿಕೊಂಡು ಅದರ ಮೇಲೆ ನನ್ನಸಹಿಯನ್ನು ಪಡೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

6. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಶ್ರೀ. ಆರ್ ಕೆ ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ ಏನು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.